ಪರಿಶೀಲನೆ ಮಾಡಿ ಕನಿಷ್ಟವೆಂದರೆ ಅರ್ಧದಷ್ಟು ಅಂದರೆ ಅಲ್ಲಿ ಒಂದು ರೂಪಾಯಿ ಬೆಲೆ ಇದ್ದರೆ, ಅದಕ್ಕೆ 50 ಪೈಸೆಯಷ್ಟು ಬೆಲೆಯಾದರೂ ರೈತರಿಗೆ ಸಿಗುವಂತೆ ಆಗಬೇಕು ಎಂದು ಅಧ್ಯಕ್ಷರ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಈಗಾಗಲೇ ಅರ್ಕಾವತಿ ಬಡಾವಣೆಗೆ ಮತ್ತು ಬೇರೆ ಕಡೆಗಳಲ್ಲಿ ಜಮೀನು ತೆಗೆದುಕೊಳ್ಳುತ್ತಿದ್ದು, ಹಾಗೆ ತೆಗೆದುಕೊಳ್ಳತಕ್ಕಂಥ ಸಮಯದಲ್ಲಿ ಹಿಂದಿನ ಮೂರು ವರ್ಷಗಳ ಸರಾಸರಿ ಮಾರುಕಟ್ಟೆ ಬೆಲೆ, ಶೇಕಡಾ 30 ರಷ್ಟು ಸೊಲೇಷಿಯಂ ಮತ್ತು ಭೂಸ್ವಾಧೀನ ಪಡೆಯುವವರೆಗೆ ಶೇಕಡಾ 12ರಷ್ಟು ಹೆಚ್ಚುವರಿ ಮಾರುಕಟ್ಟೆ ಬೆಲೆ ಹಾಗೂ ಪ್ರೋತ್ಸಾಹಕ ಯೋಜನೆಯಡಿ ಎಕರೆ ಒಂದಕ್ಕೆ 40X60 ಅಳತೆಯ ಒಂದು ನಿವೇಶನ ಕೊಡಲಾಗುತ್ತಿದೆ. ಭೂಮಿ ಭಾಗಾಯತು ಜಮೀನಾಗಿದ್ದರೆ, ಎಕರೆಗೆ ಹೆಚ್ಚುವರಿ ಒಂದು ಲಕ್ಷ ರೂಪಾಯಿ ಮತ್ತು ಶೇಕಡಾ 30ರಷ್ಟು ಸೊಲೇಷಿಯಂ ಹಾಗೂ ಶೇಕಡಾ 12ರಷ್ಟು ಹೆಚ್ಚುವರಿ ದರವನ್ನು ನೀಡಲಾಗುತ್ತಿದೆ. ಆರ್ಕಿಡ್ ಗೈಡೆನ್ಸ್ ಏನಿದೆ, ಅದಕ್ಕಿಂತಲೂ ಹೆಚ್ಚಿನ ಹಣವನ್ನು ಕೊಡತಕ್ಕಂಥಾದ್ದನ್ನು ನಾವು ಮಾಡಿದ್ದೇವೆ. ಈಗಾಗಲೇ, ಅರ್ಕಾವತಿ ಬಡಾವಣೆಗೆ ಭೂಸ್ವಾಧೀನ ಮಾಡಿಕೊಂಡಿರುವ ಜಮೀನುಗಳಿಗೆ ಒಂದು ಎಕರೆಗೆ 11 ಲಕ್ಷ ರೂಪಾಯಿಗಳಿಂದ ಹಿಡಿದು 20 ಲಕ್ಷ ರೂಪಾಯಿಗಳವರೆಗೆ ನಾವು ಹಣವನ್ನು ಕೊಟ್ಟಿದ್ದೇವೆ. ಆ ಜಮೀನಿಗೆ ಹೆಚ್ಚಿನ ಬೆಲೆ ಇದೆ ಎನ್ನುವುದು ನಮಗೆ ಗೊತ್ತು. ಅದಕ್ಕಾಗಿಯೇ, ಅವರಿಗೆ ತೊಂದರೆಯಾಗಬಾರದು ಎನ್ನುವ ರೀತಿಯಲ್ಲಿ, ಕಾನೂನು, ಮಾರ್ಕೆಟ್ ವ್ಯಾಲ್ಯು ಮತ್ತು ಹೆಚ್ಚುವರಿ ಹಣವನ್ನು ಕೊಡತಕ್ಕಂಥಾದ್ದನ್ನು ಮಾಡಿದ್ದೇವೆ. ಈಗಾಗಲೇ ಒಂದು ಎಕರೆಗೆ 11 ಲಕ್ಷ ರೂಪಾಯಿಗಳಿಂದ ಹಿಡಿದು 20 ಲಕ್ಷ ರೂಪಾಯಿಗಳವರೆಗೆ ಕೊಟ್ಟಿದ್ದೇವೆ.

ಕಾರಾಗೃಹ ಕೈದಿಗಳಿಗೆ ಸೌಕರ್ಯ ಒದಗಿಸುವುದು

27 (449) : ಶ್ರೀ ಪಾಟೀಲ್ ಬಿ.ಸಿ (ಹಿರೇಕೆರೂರು) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ರಾಜ್ಯದ ನಾನಾ ಕಾರಾಗೃಹಗಳಲ್ಲಿರುವ ಕೈದಿಗಳಿಗೆ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಲಾಗುತ್ತಿದೆಯೇ

2) ಕೈದಿಗಳಿಗೆ ವಿತರಿಸುತ್ತಿರುವ ಆಹಾರ ಧಾನ್ಯಗಳು ಹಾಗೂ ನಿಗದಿಪಡಿಸಿದ ಆಹಾರ ಸರಿಯಾಗಿ ಕೈದಿಗಳಿಗೆ ತಲುಪುತ್ತಿದೆಯೇ (ವಿವರ ನೀಡುವುದು) ತಲುಪದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

1) –ಹೌದು–

2) –ಹೌದು– ವಿವರ ಅನುಬಂಧದಲ್ಲಿ ನೀಡಿದೆ.

ANNEXURE

Weight of Cooked Food

The Weight of Raw / Cooked Food to be issued to each Prisoner

	Labouring					Non-Labouring				
	Morning		Evening			Morning		Evening		
Diet	Raw	Cooked	Raw	Cooked	Total	Raw	Cooked	Raw	Cooked	Total
Rice Diet:										
Rice	232.500 gms	790 gms	232.500 gms	790 gms	465 gms	175 gms	595 gms	175 gms	595gms	350 gms
Wheat	85.00gms	117gms	85 gms	117 gms	170gms	85 gms	117 gms	85 gms	117 gms	170 gms
Soji for Tiffan	50 gms	180gms			50 gms	50 gms.	180gms			50 gms
Wheat Diet										
Wheat	232.500 gms	320gms	232.500gms	320gms	465gms	gms	240gms	175gms	240gms	350gms
Rice	85gms	290gms	85gms	290gms	170gms	85 gms	290gms	85gms	290gms	170gms
Soji for Tiffam	50gms	180gms			50gms	50gms	180gms			50gms
Mixed Diet										
Ragi	232.500gms	600gms	232.500gms	600gms	465gms	175gms	450gms	175gms	450gms	350gms
Rice	85gms	290gms	85gms	290gms	170gms	85gms	290gms	85gms.	290gms	170gms
Soji for Tiffam	50gms	180gms			50gms	50gms	180gms			50gms

Dhal	70gms	280gms	70gms	280gms	140gms	70gms	280gms	70gms	280gms	140gms
Vegetables	85gms	220gms	85gms	220gms	170gms	85gms	220gms	85gms	220gms	170gms
Milk	20mls	100ml (Coffee/Tea)	60ml	200ml (Butter Milk)	80ml	20ml	100ml (Coffee/Tea)	60ml	200ml (Butter Milk)	80ml
Mutton:	Weeklyonce for Non Veg.					Weeklyonce for Non Veg				
Weekly once	115gms	90gms				115gms	90gms			
Beson:	Weeklyonce for Vegetarian					Weeklyonce for Vegetarian				
Beson	60gms					60gms				
Jaggery	60gms	120gms				60gms	120gms			
Sweet Oil	30gms					30gms				

ಶ್ರೀ ಬಿ.ಸಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಯಾವ ಯಾವ ಮೂಳಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ ಎಂದು ಹೇಳಿಲ್ಲ. ಖೈದಿಗಳಿಗೆ ಆಹಾರ ಧಾನ್ಯಗಳನ್ನು ಒದಗಿಸುವುದರ ಬಗ್ಗೆ, ಎಷ್ಟು ಗ್ರಾಂ ಆಹಾರಧಾನ್ಯಗಳನ್ನು ಕೊಡಲಾಗುತ್ತಿದೆ ಎಂದು ಹೇಳಿದ್ದಾರೆಯೇ ಹೊರತು, ಅವರಿಗೆ ಯಾವಯಾವ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕೊಟ್ಟಿದ್ದಾರೆ ಎನ್ನುವ ಪಟ್ಟಿ ಕೊಟ್ಟಿಲ್ಲ. ಆಹಾರಧಾನ್ಯಗಳನ್ನು ಕೊಡುವುದರ ಬಗ್ಗೆ ಮಾತ್ರ ಪಟ್ಟಿ ಇದೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯಿತಿ ಮತ್ತು ಬೇರೆ ಕಡೆಗಳಲ್ಲಿ ನಾವು ಯಾವ ರೀತಿ ಸಮಿತಿ ಮಾಡುತ್ತೇವೆಯೋ, ಅದೇ ರೀತಿ ಪ್ರತಿಯೊಂದು ಜೈಲಿನಲ್ಲೂ ಖೈದಿಗಳಿಂದ ಆಯ್ಕೆಯಾದಂಥ ಒಂದು ಸಮಿತಿ ಇದೆ. ಅವರೇ ಆಹಾರದ ವಿಷಯದಲ್ಲಿ ಸೂಪರ್‌ವಿಷನ್ ಮಾಡುತ್ತಾರೆ. ಹೆಚ್ಚಿನ ಸೂಪರ್‌ವಿಷನ್ ಮಾಡಲು ಡಿಸ್ಟ್ರಿಕ್ಟ್ ಸೆಷನ್ ಜಡ್ಜ್, ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್, ಡಿಸ್ಟ್ರಿಕ್ಟ್ ಸರ್ಜನ್, ಡಿ.ಸಿ., ಎಸ್.ಪಿ., ಸ್ವಯಂ ಸೇವಾ ಸಂಸ್ಥೆಗಳು ಇರುತ್ತವೆ. ಬೋರ್ಡ್ ಆಫ್ ವಿಸಿಟರ್ಸ್‌ನ್ನೂ ಕೂಡ ಸರ್ಕಾರದ ಪರವಾಗಿ ನಾಮಕರಣ ಮಾಡಿರುತ್ತೇವೆ. ಆಹಾರವನ್ನು ಟೆಂಡರ್ ಮುಖಾಂತರ ಕೊಂಡುಕೊಳ್ಳುತ್ತಾರೆ. ಟೆಂಡರ್ ನಿಯಮಾವಳಿಯನ್ನು ಕರಾರುವಕ್ಕಾಗಿ ಪಾಲಿಸಲಾಗುತ್ತದೆ. ಅವರ ಸುಧಾರಣೆಗಾಗಿ ವೊಕೇಷನಲ್ ಟ್ರೈನಿಂಗ್ ಮುಂತಾದ ಸೌಕರ್ಯಗಳನ್ನು ಕೂಡ ಕೊಟ್ಟಿದ್ದೇವೆ. ಇತ್ತೀಚಿನ ದಿವಸಗಳಲ್ಲಿ, ಖೈದಿಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ವಿಚಾರದಲ್ಲಿ ನಮ್ಮ ಅಧಿಕಾರಿಗಳು ಎಲ್ಲೆಲ್ಲಿ ತಪ್ಪು ಮಾಡಿದ್ದಾರೆ, ಅವರಿಗೆ ಶಿಕ್ಷೆ ಕೊಟ್ಟಿದ್ದೇವೆ. ಬೆಳಗಾವಿಯಲ್ಲಿ ಈಗಾಗಲೇ 12 ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇವೆ. ಈ ರೀತಿಯ ಕ್ರಮಗಳನ್ನು ಕೂಡ ತೆಗೆದುಕೊಳ್ಳುತ್ತೇವೆ. ಖೈದಿಗಳಿಗೆ ಸೌಕರ್ಯಗಳನ್ನು ಕಲ್ಪಿಸಿ ಕೊಡುತ್ತೇವೆ, ಅಲ್ಲದೆ ಈಗ ಜನಪ್ರತಿನಿಧಿಗಳೂ ಕೂಡ ಆ ಸಮಿತಿಯಲ್ಲಿರುತ್ತಾರೆ, ಎಲ್ಲರೂ ಅದನ್ನು ನೋಡುತ್ತಾರೆ.

ಶ್ರೀ ಬಿ.ಸಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಜೈಲುಗಳಲ್ಲಿ ಕೊಡುತ್ತಿರುವ ಆಹಾರ ಸರಿಯಾಗಿ ಖೈದಿಗಳಿಗೆ ಮುಟ್ಟುತ್ತಿಲ್ಲ. ಇದನ್ನು ನಾನು ನನ್ನ ಸ್ವಂತ ಅನುಭವದ ಮೇಲೆ ಹೇಳುತ್ತಿದ್ದೇನೆ. ತಾವು ಉತ್ತರದಲ್ಲಿ ತಿಳಿಸಿರುವಂತೆ 85 ಗ್ರಾಂ ಪ್ರಮಾಣದಲ್ಲಿ ಅಕ್ಕಿಯನ್ನು ಕೊಡುತ್ತಿಲ್ಲ. ಅಲ್ಲಿ ಕೊಡುವ ಸಾರು ಕೇವಲ ಬಿಸಿನೀರಾಗಿ ಇರುತ್ತದೆಯೇ ಹೊರತು ಅದರಲ್ಲಿ ಉಪ್ಪು, ಖಾರದ ಅಂಶಗಳ್ಯಾವುವೂ ಇರುವುದಿಲ್ಲ. ಜೈಲುಗಳಲ್ಲಿ ಬೆಳಗಿನ ಹೊತ್ತು ಟೀ ಮಾಡುತ್ತಾರೆ. ಅದರಲ್ಲಿ ಹಾಲಿನ ಅಂಶ ಇರುವುದಿಲ್ಲ. ಜೈಲುಗಳಲ್ಲಿ ಎರಡು ರೀತಿಯ ವ್ಯವಸ್ಥೆಗಳು ನಡೆಯುತ್ತಿವೆ. ಒಂದು ತರಹದ ಖೈದಿಗಳಿಗೆ ಯಾವ ರೀತಿಯ ಸೌಲಭ್ಯಗಳೂ ಸಿಗುವುದಿಲ್ಲ. ಆದರೆ ಒಂದು ತರಹದ ಖೈದಿಗಳು ಪ್ರತ್ಯೇಕವಾಗಿ ಅವರದೇ ಆದಂಥ ಅಡುಗೆಯನ್ನು ಕೂಡ ಮಾಡಿಕೊಳ್ಳುವಂಥ ವ್ಯವಸ್ಥೆ ಅಲ್ಲಿನ ಅಧಿಕಾರಿಗಳ ಕುಮ್ಮಕ್ಕಿನಿಂದ ನಡೆಯುತ್ತಿದೆ. ಅವರಿಗೆ ಬೇಕಾದಂಥ ತಿಂಡಿಗಳನ್ನು ಮಾಡಿಕೊಳ್ಳಬಹುದು. ಬೇಕಾದ ಊಟವನ್ನು ಮಾಡಬಹುದು. ಇಲ್ಲಿ ಏನಾಗುತ್ತದೆಂದರೆ, ನ್ಯಾಯಾಲಯದಿಂದ ಶಿಕ್ಷೆಗೆ ಒಳಗಾದ ಖೈದಿ, ಆ ನ್ಯಾಯಾಲಯದಿಂದ ನೀಡಿದಂಥ ಶಿಕ್ಷೆಯನ್ನು ಅನುಭವಿಸಬೇಕೇ ಹೊರತು ಅವರ ಜೀವನಪರ್ಯಂತ ಜೈಲಿನ ಒಳಗಿರುವಾಗ ಈ ಆಹಾರಧಾನ್ಯ ವಿತರಣೆಯಲ್ಲಿ ಕೊರತೆಯುಂಟಾಗಿ ದೈಹಿಕ ಶಿಕ್ಷೆಯನ್ನು ಸಹ ಅನುಭವಿಸುವಂಥ ಪರಿಸ್ಥಿತಿ ಇವತ್ತು ಜೈಲಿನಲ್ಲಿ ನಡೆಯುತ್ತಿದೆ. ಆದರೆ ಇದರ ಬಗ್ಗೆ ಅಧಿಕಾರಿಗಳು ಏನು ಕ್ರಮ ಜರುಗಿಸುತ್ತಿದ್ದಾರೆ? ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಆದರೆ ಅಲ್ಲಿ ಅಧಿಕಾರಿಗಳು ಅವರದೇ ಆದಂಥ ರೂಲ್ಸ್ ಅನ್ನು frame ಮಾಡಿಕೊಂಡಿದ್ದಾರೆ. ಆದ್ದರಿಂದ ಅಲ್ಲಿ ಸರಿಯಾದ ವ್ಯವಸ್ಥೆಯನ್ನು ಮಾಡಿದರೆ ಸೂಕ್ತ ಎಂದು ನನ್ನ ಅನಿಸಿಕೆಯನ್ನು ತಮ್ಮ ಮುಂದಿಡುತ್ತೇನೆ,

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ) : ಮಾನ್ಯ ಅಧ್ಯಕ್ಷರೆ, ಜೈಲಿನಲ್ಲಿ ಎಲ್ಲಾ ವ್ಯವಸ್ಥೆಗಳಿಗಿಂತ ನೀರಿನ ವ್ಯವಸ್ಥೆ ಬಹಳ ಕೆಟ್ಟದಾಗಿದೆ. ನೀರನ್ನು ಬೆಳಿಗ್ಗೆ ಒಂದು ಸಲ, ಮಧ್ಯಾಹ್ನ ಒಂದು ಸಲ ಮತ್ತು ಸಾಯಂಕಾಲ ಒಂದು ಸಲ ಬಿಡುವಂಥ ವ್ಯವಸ್ಥೆ ಮಾಡಿದರೆ ಆ ಜೈಲಿನೊಳಗಡೆ ಸೆಲ್‌ನಲ್ಲಿರುವಂಥ ಆ ಟ್ಯಾಂಕುಗಳು ಲೀಕ್ ಆಗುವಂಥ ವ್ಯವಸ್ಥೆ ಇರುವುದರಿಂದ, ಆ ಖೈದಿಗಳಿಗೆ ಬೇರೆ ಎಲ್ಲಾ ವ್ಯವಸ್ಥೆಗಳ ಸಮಸ್ಯೆಯಾಗುವಂಥದ್ದು ಇರುವುದರಿಂದ ನೀರನ್ನು ಶೇಖರಿಸಿಡಲು ದೊಡ್ಡ ಟ್ಯಾಂಕ್ ಅನ್ನು ಕಟ್ಟಿ ಎಲ್ಲಾ ರೂಂಗಳಿಗೆ ನೀರಿನ ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡಿದರೆ ಬಹಳಷ್ಟು ಲಾಭವಾಗುತ್ತದೆ ಎನ್ನುವಂಥದ್ದು ನನ್ನ ಅಭಿಪ್ರಾಯವಾಗಿದೆ. ಏಕೆಂದರೆ ಜೈಲಿನಲ್ಲಿ ಮೇಜರ್ ಸಮಸ್ಯೆ ಇದಾಗಿದೆ. ಇನ್ನು ನಾವು ಖೈದಿಗಳ ಬಗ್ಗೆ ಮಾತ್ರ ಹೇಳಿದೆವು. ಆದರೆ ಅಲ್ಲಿರುವಂಥ ವಾರ್ಡನ್‌ಗಳ ಮನಃಸ್ಥಿತಿ ಏನಿದೆ ಎಂದರೆ, ಪೊಲೀಸರಿಗೂ ನಮಗೂ ತಾರತಮ್ಯವಿದೆ, ಪೊಲೀಸರಿಗೆ ರಜಾವಧಿಯ ಒಂದು ತಿಂಗಳ ಸಂಬಳ ಕೊಡುತ್ತಾರೆ, ನಮಗೆ 15 ದಿನದ್ದು ಮಾತ್ರ ಹಣ ಕೊಡುತ್ತಾರೆ, ನಮಗೂ ಅವರಂತೆ ಒಂದು ತಿಂಗಳ ರಜಾ ಸಂಬಳವನ್ನು ಕೊಡುವಂಥ ವ್ಯವಸ್ಥೆ ಆಗಬೇಕೆನ್ನುವಂಥದ್ದು ಜೈಲಿನ ವಾರ್ಡನ್ ಇನ್ನಿತರರ ಅನಿಸಿಕೆ ಇದೆ. ಹಾಗೆಯೇ ವಾರ್ಡನ್‌ಗಳಿಗೆ ಸಹ ಕಷ್ಟ ಇದೆ. ಖೈದಿಗಳನ್ನು ಹೊರಗಡೆಗೆ ತೋಟಕ್ಕೆ ಕರೆದುಕೊಂಡು ಹೋದರೆ ಅಲ್ಲಿ ಕಾಂಪೌಂಡ್‌ನ ವ್ಯವಸ್ಥೆ ಇಲ್ಲ, ಇದನ್ನೆಲ್ಲಾ ಮಾಡಿಕೊಡುವುದರಿಂದ ಜೈಲಿನ ವಾರ್ಡನ್‌ಗಳಿಗೂ ಅನುಕೂಲವಾಗುತ್ತದೆ. ದೊಡ್ಡ ಟ್ಯಾಂಕುಗಳನ್ನು ಕಟ್ಟಿ ನೀರಿನ ವ್ಯವಸ್ಥೆ ಮಾಡುವುದು, ಬೋರ್‌ವೆಲ್ ವ್ಯವಸ್ಥೆ ಮೂಲಕ ನೀರನ್ನು ಕೊಡುವಂಥದ್ದು ಮಾಡಿದರೆ ಒಳ್ಳೆಯದೆಂಬುದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ನಾನು ಮಂಗಳೂರು ಜೈಲಿನ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ಕಳೆದ ಒಂದೂವರೆ ವರ್ಷದಿಂದ ಚೀಫ್ ಜೈಲರ್ ಪೋಸ್ಟ್ ಇದ್ದರೂ ಕೂಡ ಚೀಫ್ ಜೈಲರ್‌ನ ನೇಮಕವಾಗಿಲ್ಲ. 8 ವಾರ್ಡರ್‌ಗಳ ಕೊರತೆ ಇದ್ದು ಎರಡು ವರ್ಷಗಳಿಂದ ನೇಮಕವಾಗಿಲ್ಲ. ಎಫ್‌ಡಿಸಿ ಹುದ್ದೆ ಒಂದು ಖಾಲಿ ಇದ್ದು ಕಳೆದ 4 ವರ್ಷದಿಂದ ತುಂಬಿಲ್ಲ. ಈ ಮೂಲಭೂತ ಸೌಲಭ್ಯಗಳ ಜೊತೆಗೆ ಈ ಸಿಬ್ಬಂದಿಗಳ ನೇಮಕಾತಿ ಬಗ್ಗೆ ಕೂಡ ವಿಶೇಷವಾದ ಗಮನವನ್ನು ಕೊಡಬೇಕಾಗುತ್ತದೆ. 150 ಕೆಪಾಸಿಟಿ ಇರುವಲ್ಲಿ 241 ಸ್ಟೆಂಥ್ ಅಂದರೆ ಇನ್‌ಮೇಟ್ಸ್ ಇದ್ದಾರೆ. ಇಂಥ ಕಡೆಯೂ ಕೂಡ ಇದರ ಕಡೆಗೆ ಕೊಡಬೇಕಾಗಿರತಕ್ಕಂಥ ಆದ್ಯತೆಯನ್ನು ಕೊಟ್ಟಿಲ್ಲವೆಂದು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷರೆ, ಮಾನವೀಯತೆಯ ದೃಷ್ಟಿಯಿಂದ ಒಳ್ಳೆಯ ಪ್ರಶ್ನೆಗಳನ್ನು ಶ್ರೀ ಬಿ.ಸಿ. ಪಾಟೀಲರು ಕೇಳಿದ್ದಾರೆ. ಇನ್ನು ಶ್ರೀ ಜೀವರಾಜ್‌ರವರು ಮೊನ್ನೆ ಅಲ್ಲಿಗೆ ಹೋಗಿ ಬಂದಿದ್ದಾರೆ. ಅವರಿಗೂನೂ ಕೂಡ ಸ್ವಲ್ಪ ಅಲ್ಲಿ ಎಲ್ಲಾ ಸಮಸ್ಯೆ ಇದೆ. ಏಕೆಂದರೆ ಇದು ಆಗುತ್ತಿಲ್ಲವೆಂದು ನಾನು ಹೇಳುವುದಿಲ್ಲ. ಇದು ಆಗುತ್ತಿದೆ. ಅದಕ್ಕಾಗಿ ಇದರ ಬಗ್ಗೆ ಹೆಚ್ಚಿನ ಕ್ರಮ ತೆಗೆದುಕೊಳ್ಳಬೇಕೆಂದು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಈ ತರಹದ ಪ್ರಶ್ನೆ ಬರತಕ್ಕಂಥದ್ದು ಬಹಳ ವಿರಳ. ಜೈಲಿನಲ್ಲಿರತಕ್ಕಂಥ ಖೈದಿಗಳಿಗೆ ಮತ್ತು ಇತರ ವಿಚಾರಗಳ ಬಗ್ಗೆ ಸಲಹೆ ಸೂಚನೆಗಳನ್ನು ತಾವು ಕೊಟ್ಟಿದ್ದೀರಿ, ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮೊನ್ನೆ ನಾನು ಬಿಜಾಪುರ ಜಿಲ್ಲೆಗೆ ತಾವು ನಮ್ಮವರು ಕೆಲವರನ್ನು ಕಳುಹಿಸಿದ್ದರಿಂದ

ನೋಡುವುದಕ್ಕೆ ಹೋಗಿದ್ದೆ. ಅಲ್ಲಿ ನಮ್ಮ ಸಾವಿರಾರು ಜನ ಖೈದಿಗಳಿದ್ದಾರೆ. ಅವರ ವಿನಂತಿ ಏನೆಂದರೆ, ಬೇರೆ ರಾಜ್ಯಗಳಲ್ಲಿ ಅವರ ನಡತೆ ನೋಡಿ ಮಾಡಿರುವಂಥ ಶಿಕ್ಷೆಯನ್ನು ಕಡಿಮೆ ಮಾಡಿ ಅವರನ್ನು ಆಗಸ್ಟ್ 15 ಮತ್ತು ಜನವರಿ 26 ರಂದು ಬಿಡುವಂಥ ಪದ್ಧತಿ ಇದೆ. ಆ ರೀತಿ ಯಾರು ಒಳ್ಳೆಯ ನಡತೆಯಿಂದಿದ್ದಾರೆ. ಅವರಿಗೆ ಶಿಕ್ಷೆ ಕಡಿಮೆ ಮಾಡಿ ಅವರಿಗೇನಾದರೂ ರಿಲೀಫ್ ಕೊಡುವುದರ ಬಗ್ಗೆ ಸರ್ಕಾರ ಯೋಚನೆ ಏನಾದರೂ ಮಾಡಬಹುದೇ ಎಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಇದನ್ನು ಸರ್ಕಾರದ ಗಮನಕ್ಕೆ ತಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆಂದು ಅವರಿಗೆ ಅಲ್ಲಿ ಅಶ್ಯೂರೆನ್ಸ್ ಕೊಟ್ಟು ಬಂದಿದ್ದೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳಿದ್ದಾರೆ, 1978ರಲ್ಲಿ ಇವರ ಅಮೆಂಡ್‌ಮೆಂಟ್ ಆಗತಕ್ಕಂಥದ್ದು ಇತ್ತು. ಆಗಿನ ಕಾಲದಲ್ಲಿ ರಾಜ್ಯ ಸರ್ಕಾರದಲ್ಲಿದ್ದಂಥ ಶ್ರೀಮಾನ್ ದೇವರಾಜ್ ಅರಸುರವರು ಇದನ್ನು ಶಿಫಾರಸ್ಸು ಮಾಡಿದ್ದರು. ಯಾರ ನಡವಳಿಕೆ ಚೆನ್ನಾಗಿದೆ ಎನ್ನತಕ್ಕಂಥ ರೀತಿಯಲ್ಲಿ 26ನೇ ತಾರೀಕು ಜನವರಿಯಲ್ಲಿ ಮತ್ತು 15ನೇ ಆಗಸ್ಟ್ ಸಂದರ್ಭದಲ್ಲಿ ಕೆಲವು ಖೈದಿಗಳನ್ನು ಬಿಡತಕ್ಕಂಥದ್ದು ಇದೆ ಮತ್ತು ಬಿಡುತ್ತಾ ಬಂದಿದ್ದೇವೆ. ಅದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ನಾವೇನೂ ಕೂಡ ಯಾರಿಗೂ ಜೈಲಿಗೆ ಕಳುಹಿಸತಕ್ಕಂಥ ಪ್ರಯತ್ನವನ್ನು ನಾವು ಏಕೆ ಮಾಡೋಣ? ನೀವಾಗಿಯೇ ನೀವು ಹೋಗುತ್ತಿದ್ದೀರಿ, ಅದು ಹೋಗಿರುವುದು ಸರಿಯಾಗಿಯೇ ಇತ್ತು ಕೆಲವು ಸಮಸ್ಯೆಗಳನ್ನು ನಮ್ಮ ಗಮನಕ್ಕೆ ತಂದಿದ್ದಿರಿ.

ಸವಳು ಜವಳಿನಿಂದ ಹಾನಿಗೊಳಗಾದ ಭೂಮಿಯ ಸುಧಾರಣೆ

28 (49) : ಶ್ರೀ ಕಾರಜೋಳ ಗೋವಿಂದ ಮಕಟಪ್ಪ (ಮುಧೋಳ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಧೋಳ ತಾಲ್ಲೂಕಿನಲ್ಲಿ ಸವಳು ಜವಳಿನಿಂದ ಹಾನಿಗೊಳಗಾದ ಭೂಮಿಯ ವಿಸ್ತೀರ್ಣ ಎಷ್ಟು: (ವಿವರಗಳನ್ನು ಎಕರೆಗಳಲ್ಲಿ ನೀಡುವುದು);

ಆ) ಸವಳು ಜವಳಿನಿಂದ ಹಾನಿಗೊಳಗಾದ ಕ್ಷೇತ್ರದಲ್ಲಿ ಅಂತರ ಬಸಿಗಾಲುವೆಗಳನ್ನು ನಿರ್ಮಾಣಮಾಡಿ ಸುಧಾರಣೆಗಳನ್ನು ಮಾಡಲು ಸರ್ಕಾರ ಹಾಕಿಕೊಂಡಿರುವ ಯೋಜನೆಯ ವಿವರಗಳನ್ನು ನೀಡುವುದು;

ಇ) ಈ ಯೋಜನೆಯ ಒಟ್ಟು ಮೊತ್ತವೆಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಮುಧೋಳ ತಾಲ್ಲೂಕಿನಲ್ಲಿ ಒಟ್ಟು 11092.31 ಎಕರೆಯಷ್ಟು ಭೂಮಿಯು ಸವಳು ಜವಳುನಿಂದ ಹಾನಿಗೊಳಗಾಗಿದೆ.

ಆ) ಕೇಂದ್ರ ಸರ್ಕಾರದ ಮಾರ್ಗಸೂಚಿಗಳನುಸಾರ ಹಾನಿಗೊಳಗಾದ ಕ್ಷೇತ್ರದಲ್ಲಿ ಅಂತರಬಸಿಗಾಲುವೆಗಳನ್ನು ನಿರ್ಮಾಣ ಮಾಡಿ ಸುಧಾರಣೆಗಳನ್ನು ಮಾಡಲು ಪ್ರಸ್ತಾವನೆಗಳನ್ನು ತಯಾರಿಸಿ, ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ, ಕೇಂದ್ರ ಸರ್ಕಾರದ ಅನುಮೋದನೆ ಪಡೆದ ನಂತರ ಅನುಷ್ಠಾನಗೊಳಿಸಬೇಕಾಗಿರುತ್ತದೆ. ಅದರಂತೆ ಪ್ರಸ್ತಾವನೆಗಳನ್ನು ತಯಾರಿಸುತ್ತಿದ್ದು, ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆದ ನಂತರ ಈ ಕಾರ್ಯಕ್ರಮವನ್ನು ಅನುದಾನದ ಲಭ್ಯತೆಯನ್ನು ಅನುಸರಿಸಿ ಅನುಷ್ಠಾನಗೊಳಿಸಲಾಗುವುದು.